

ವೈಭವ್ ಸೂರ್ಯವಂಶಿ

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಚುಟುಕು ಕ್ರಿಕೆಟ್‌ನಲ್ಲಿ ಮೊದಲ ಆರು ಓವರ್‌ಗಳಲ್ಲಿ ಹಿಂದೆ ಯಾವ ವರ್ಷವೂ ದಾಖಲಾಗದ ವೇಗದಲ್ಲಿ ಈ ಸಲ ರನ್‌ಗಳು ಹರಿದುಬರುತ್ತಿವೆ. ಆ ಓವರ್‌ಗಳಲ್ಲಿ ದೊಡ್ಡ ಹೊಡೆತದ ಕಾಣಿಕೆ ನೀಡಲೆಂದೇ ಬಿಸಿರಕ್ತದ ಹುಡುಗರು ಸಜ್ಜುಗೊಂಡಿದ್ದಾರೆ. ಆ ಹುಡುಗರು ದೇಶದ ಕ್ರಿಕೆಟ್ ಭವಿಷ್ಯ ರೂಪಿಸಲು ಅಗತ್ಯವಿರುವ ಸಾವಧಾನವನ್ನೂ ರೂಢಿಸಿಕೊಳ್ಳುವರೇ ಎಂಬ ಪ್ರಶ್ನೆ ಎದುರಲ್ಲಿದೆ.

# ಆರೇ ಓವರ್‌ನಲ್ಲಿ ಸೂರೆಗೊಳ್ಳುವ ಆಟ

■ ವಿಶಾಖ ಎನ್.

ವಿದರ್ಭದ 24 ವರ್ಷ ವಯಸ್ಸಿನ ಪ್ರಫುಲ್ ಹಿಂಗೆ ಏಪ್ರಿಲ್ 13ರಂದು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ತಾವು ಆಡಿದ ಮೊದಲ ಪಂದ್ಯದ ಮೊದಲ ಓವರ್‌ನಲ್ಲಿ ಮೂರು ಪ್ರಮುಖ ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದರು. ಮಹಾ ದಾಳಿಕೋರ ಬ್ಯಾಟ್ಸ್‌ಮನ್ ಎಂದೇ ಹೆಸರಾಗಿರುವ 15 ವರ್ಷದ ವೈಭವ್ ಸೂರ್ಯವಂಶಿ 'ಗೋಲ್ಡನ್ ಡಕ್'ಗೆ ಕ್ಯಾಚ್ ಕೊಟ್ಟರು. ಆಮೇಲೆ ಧ್ರುವ್ ಜುರೇಲ್ ಬ್ಯಾಟ್‌ನ ಅಂಚಿಗೆ ತಾಕಿದ ಚೆಂಡು ವಿಕೆಟ್‌ಗೆ ಬಡಿಯಿತು. ಪ್ರೆಟೋರಿಯಸ್ ದೊಡ್ಡ ಹೊಡೆತಕ್ಕೆ ಕೈಹಾಕಿ ಕ್ಯಾಚಿತ್ತರು. ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡಕ್ಕೆ ಅಂಥದೊಂದು ಕನಸಿನ ಆರಂಭವನ್ನು ದಕ್ಕಿಸಿಕೊಟ್ಟ ಪ್ರಫುಲ್ ಒಂದು ಬಗೆಯಲ್ಲಿ ಈ ಐಪಿಎಲ್‌ನಲ್ಲಿ ಬೌಲರ್‌ಗಳ ಮುಖದಲ್ಲಿ ದೊಡ್ಡ ನಗುವನ್ನು ತಂದಿತ್ತರೆನ್ನುವುದು ನಿಜ.

ಐಪಿಎಲ್ ಇತಿಹಾಸದಲ್ಲಿಯೇ ಈ ಸಲದ ಋತುವಿನಲ್ಲಿ ಪವರ್ ಪ್ಲೇನಲ್ಲಿ ಅತಿ ಹೆಚ್ಚು ಸರಾಸರಿ ರನ್‌ಗಳು ಹರಿದುಬಂದಿವೆ. ಹೀಗಾಗಿ ಮೊದಲ ಓವರ್‌ನಲ್ಲಿ ಬೌಲರ್ ಇಬ್ಬರು ಅಥವಾ ಮೂವರನ್ನು ಔಟ್ ಮಾಡುವ ವಿದ್ಯಮಾನ ಅತ್ಯಪರೂಪವೇ ಆಗಿಬಿಟ್ಟಿದೆ.

ಏಪ್ರಿಲ್ 12ರವರೆಗೆ ನಡೆದ ಪಂದ್ಯಗಳನ್ನು ಗಣನೆಗೆ ತೆಗೆದುಕೊಂಡರೆ, ಈ ಸಲ ಪವರ್ ಪ್ಲೇ ಓವರ್‌ಗಳಲ್ಲಿ ಅರ್ಥಾತ್ ಮೊದಲ ಆರು ಓವರ್‌ಗಳಲ್ಲಿ ಹರಿದುಬಂದಿರುವ ರನ್‌ಗಳ ಸರಾಸರಿ ಹಿಂದೆಂದಿಗಿಂತಲೂ ಅತಿ ಹೆಚ್ಚು–ಪ್ರತಿ ಓವರ್‌ಗೆ 10.47–ಎನ್ನುವುದಕ್ಕೆ ಅಡಿಗೆರೆ ಎಳೆಯಬೇಕು. 2025ರ ಕ್ರಿಕೆಟ್ ಋತುವಿನಲ್ಲಿ ಪವರ್‌ಪ್ಲೇನಲ್ಲಿ ಪ್ರತಿ ಓವರ್‌ಗೆ ಸರಾಸರಿ 9.61 ರನ್‌ಗಳು ದಾಖಲಾಗಿದ್ದವು.

ಕೋವಿಡ್ ಕಾಲಘಟ್ಟದವರೆಗೆ ಪರಿಸ್ಥಿತಿ ಹೀಗೆ ಇರಲಿಲ್ಲ. 2020–21ರಲ್ಲಿ ಪವರ್‌ಪ್ಲೇನಲ್ಲಿ ಹರಿದುಬಂದ ಸರಾಸರಿ ರನ್‌ಗಳು 7.71 ಮಾತ್ರ. 2022ರಲ್ಲಿ 7.82ಕ್ಕೆ ಏರಿಕೆಯಾಯಿತು. 2023ರಲ್ಲಿ 8.43 ಆಯಿತು. 2024ರಲ್ಲಿ 9.49ಕ್ಕೆ ಏರಿತು.